(ಶ್ರೀ ಎಚ್. ಎಂ. ಚನ್ನಬಸಪ್ಪ.)

ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕೆಲವು ಅಡ್ಡಿ ಆತಂಕಗಳಿವೆ, ಕೆಲಸಗಳು ನಿಧಾನವಾಗುತ್ತವೆ ಎಂದು ಹೇಳಿದರು. ತ್ವರಿತಮಾಡುವುದಕ್ಕೂ ಅಡ್ಡಿ ಆತಂಕಗಳನ್ನು ಕಡಮೆಮಾಡುವುದಕ್ಕೂ ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟೂ ಮಾಡಿ, ಆದಷ್ಟು ಜಾಗ್ರತೆ ಸುಲಲಿತವಾಗಿ ಕೆಲಸ ನಡೆಸುವುದಕ್ಕೆ ಪ್ರಯತ್ನಮಾಡುತ್ತೇವೆ. ಜೊತೆಗೆ ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟರೆ ಬಹಳ ವಿಶ್ವಾಸದಿಂದ ಪರಿಶೀಲನೆಮಾಡಿ, ಅಂಗೀಕಾರ ಯೋಗ್ಯವಾಗಿದ್ದರೆ ಅವುಗಳನ್ನು ಅಂಗೀಕಾರ ಮಾಡುವುದಕ್ಕೆ ಖಂಡಿತವಾಗಿಯೂ ತೊಂದರೆ ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಶೇಕಡ ಮೂರರಷ್ಟು ಪ್ರತಿಫಲ ಬರಬೇಕೆಂದಿರುವುದನ್ನು ಕಡಮೆ ಮಾಡುತ್ತಾರೆಯೇ? ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಲ್ಪ ಹೆಚ್ಚು ಕಡಮೆ ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ ಎಲ್ಲ ವಿಷಯಗಳಿಗೂ ನಾನು ಉತ್ತರ ಹೇಳಿದ್ದೇನೆ. ನಿರ್ದಿಷ್ಟವಾಗಿ ಶೇಕಡ ಮೂರರಷ್ಟು ಪ್ರತಿಫಲ ಬರಬೇಕೆಂದಿರುವ ನಿಯಮವನ್ನು ನಡಿಲಸಬೇಕೆಂಬ ವಿಷಯ ಪ್ರಾಮುಖ್ಯವಾದುದು, ಈ ನಿರ್ಣಯದ ಉದ್ದೇಶ ಇದು ಎಂದು ಹೇಳಿದರು. ಈ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಎಷ್ಟು ಕಾತರತೆಯಿದೆಯೋ ಅಷ್ಟೇ ಉತ್ಸಾಹ ಸರ್ಕಾರಕ್ಕಿದೆ. ಕೆರೆಗಳನ್ನೂ ವ್ಯವಸಾಯಕ್ಕನುಕೂಲವಾಗುವ ದೇಶದ ಉತ್ಪತ್ತಿಯನ್ನು ಹೆಚ್ಚುಮಾಡಕ್ಕೆ ಒಳ್ಳೆಯ ಕೆರೆಗಳನ್ನು ರಿಪೇರಿ ಮಾಡಬೇಕೆಂಬ ವಿಷಯದಲ್ಲಿ ಮಾನ್ಯ ಸದಸ್ಯರಿಗೆಷ್ಟು ಉತ್ಸಾಹವಿದೆಯೋ ಸರ್ಕಾರಕ್ಕೂ ಅಷ್ಟೇ ಇದೆ, ಇನ್ನೂ ಹೆಚ್ಚಾಗಿಯೇ ಇದೆ. ಉತ್ಪತ್ತಿ ಅಥವಾ ಪ್ರತಿಫಲವನ್ನು ಗಮನಿನಬಾರದೆಂದು ಹೇಳಿದ್ದಾರೆ. ಅದಕ್ಕೆ ಇಷ್ಟು ಹೇಳಬಹುದು: ತಾವು ಯಾವುದಾದರೂ ನಿರ್ದಿಷ್ಟವಾದ ಕೆಲಸಕಾರ್ಯಗಳನ್ನು ಸರ್ಕಾರದ ಮುಂದಿಟ್ಟು, ನಾವು ಹಾಕಿಕೊಂಡಿರುವ ನೀತಿಯನ್ನು ಸ್ವಲ್ಪಮಟ್ಟಿಗೆ ನಡಿಲಮಾಡಬೇಕೆಂದು ಸೂಚನೆ ಕೊಟ್ಟರೆ ಆಯಾ ಸನ್ನಿವೇಶ ಕೆಲಸದ ಯೋಗ್ಯತೆಯಮೇಲೆ ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಸಾಕೆಂದು ಭಾವಿಸುತ್ತೇನೆ. ಆದರೆ ಈಗಿರುವ ರೀತಿ ನಿರ್ಣಯವನ್ನು ಅಂಗೀಕಾರಮಾಡಿದ ಪಕ್ಷದಲ್ಲಿ ಈ ನಿರ್ಣಯಕ್ಕೆ ಸರ್ಕಾರದವರು ಬದ್ಧರಾಗುತ್ತಾರೆ. ಕೊನೆಗೆ ಏನೂ ಉತ್ಪತ್ತಿಯಿಲ್ಲದಿದ್ದರೂ ಅಂಥ ಕೆರೆಗಳನ್ನು ರಿಪೇರಿಮಾಡಬೇಕೆಂದು ಅರ್ಥವಾಗುತ್ತದೆ, ಈ ನಿರ್ಣಯದ ಪ್ರಕಾರ. ಆದುದರಿಂದ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ಸರ್ಕಾರದವರು ಕ್ಷಾಮ ಪೀಡಿತ ಪ್ರದೇಶಗಳಲ್ಲಿಟ್ಟಿರುವ ಸಹಾನುಭೂತಿಯನ್ನು ಗಣನೆಗೆ ತೆಗೆದುಕೊಂಡು, ಈ ಪ್ರದೇಶಗಳ ಸಂಬಂಧವಾಗಿ ಹಾಕಿಕೊಂಡಿರುವ ಯೋಜನೆ ಮತ್ತು ಅನುಸರಿಸುವ ನೀತಿಯನ್ನು ಗಮನಿಸಿ . . . .

ಉಪಾಧ್ಯಕ್ಷರು.—ಕ್ಷಾಮಪೀಡಿತ ಪ್ರದೇಶ ಎಂಬುದನ್ನು ಒಪ್ಪಿಕೊಂಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವಯಾವ ಪ್ರದೇಶಗಳು ಕ್ಷಾಮಪೀಡಿತವೆಂಬುದನ್ನು ನೋಡಿ . . . . . .

ಶ್ರೀ ಡಿ. ದೇವರಾಜ ಅರಸ್ (ಹುಣಸೂರ).—ಕ್ಷಾಮ ಪ್ರದೇಶಗಳು ಯಾವ ಯಾವುದೆಂದು ಆಗಲೇ ಘೋಷಿಸಿದ್ದಾರೆಂದು ಕೆಲವು ಸದಸ್ಯರು ಹೇಳಿದರು. ಹೀಗೆ ಘೋಷಿಸಿದ್ದ ಮಾತ್ರಕ್ಕೇ ಅವು ಯಾವಾಗಲೂ ಕ್ಷಾಮಪೀಡಿತ ಪ್ರದೇಶವಾಗಿರುತ್ತವೆಯೇ?

ಶ್ರೀ ಕೆ. ಪ್ರಭಾಕರ್.—ಸರ್ಕಾರದವರು ದೊಡ್ಡ ಬಳ್ಳಾಪುರ ತಾಲ್ಲೂಕು ಗುಂದಂಕೆರೆ ಮತ್ತು ಮಾಗಡಿ ತಾಲ್ಲೂಕು ಬೆಳಗುಂಬ ಕೆರೆ ಇವುಗಳ ವಿಷಯದಲ್ಲಿ ಯಾವ ನೀತಿಯನ್ನನುಸರಿಸಿ ಮಾಡಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಕಡೆ ಕ್ಷಾಮ ಬಂದರೆ ಎಲ್ಲಾ ಕಾಲದಲ್ಲಿಯೂ ಅದಿರುತ್ತದೆ ಎಂದು ಹೇಳುವುದು ತಪ್ಪು. ಕೆರೆ ಕಟ್ಟಬೇಕೆಂಬುದನ್ನೂ ರಿಪೇರಿ ಮಾಡಬೇಕೆಂಬುದನ್ನೂ ಸಹಾನುಭೂತಿಯಿಂದ ಪರಿಶೀಲನೆಮಾಡಿ ಯಾವ ಯಾವುದು ಸಾಧ್ಯವೆಂಬುದನ್ನು ಸರ್ಕಾರದವರು ಉದಾರವಾಗಿ ನೋಡಿ ಕೆಲಸ ಕಾರ್ಯಗಳನ್ನು ಕೈಗೊಳ್ಳುತ್ತಾರೆಂದು ಹೇಳುತ್ತೇನೆ. ಇರತಕ್ಕ ಅಡ್ಡಿ ಆತಂಕಗಳನ್ನು ಕಡಮೆಮಾಡಿ, ತ್ವರಿತವಾಗಿ ಕೆಲಸಮಾಡುವುದಕ್ಕೆ ಪ್ರಯತ್ನಪಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಈ ದೃಷ್ಟಿಯಿಂದ ಈಗಿರತಕ್ಕ ರೀತಿಯಲ್ಲಿ ಈ ನಿರ್ಣಯವನ್ನು ಒತ್ತಾಯ ಮಾಡಬೇಡಿ ಎಂದು ನಾನು ಒತ್ತಾಯಮಾಡುತ್ತೇನೆ.

ಶ್ರೀ ಮುದ್ದುರಾಮಯ್ಯ.—ಸರ್ಕಾರದವರು ಕೊಟ್ಟಿರತಕ್ಕ ಉತ್ತರ ಅಷ್ಟು ತೃಪ್ತಿಕರವಾಗಿಲ್ಲದಿದ್ದರೂ ವಿಧಿಯಿಲ್ಲದೆ ಈ ನಿರ್ಣಯವನ್ನು ವಾಪಸು ಪಡೆಯಲು ಅನುಮತಿ ಬೇಡುತ್ತೇನೆ.

The resolution was, by leave, withdrawn.

Mr. DEPUTY SPEAKER.—The House will adjourn now for Lunch and reassemble at 3-30 P.M.

The House adjourned for Lunch at Three of the Clock and met again at Thirty Minutes past Three of the Clock.

[MR. DEPUTY SPEAKER in the Chair.]

No. 3.—Hostels for Scheduled Castes Students studying Technical and Industrial Subjects.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ:—

> "ಕೈಗಾರಿಕಾ ಸಂಬಂಧವಾದ ಮತ್ತು ಪ್ರಾದೇಶಿಕ ಭಾಷಿಕ (ಟೆಕ್ನಿಕಲ್) ಸಂಬಂಧವಾದ ವ್ಯಾಸಂಗ ಕ್ರಮಗಳನ್ನು ಕೈಕೊಳ್ಳುವ ಪೆಡ್ಯೂಲ್ಡ್ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಹಾಸ್ಟೆಲ್‌ಗಳನ್ನು ಏರ್ಪಡಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, ಘನ ಸರ್ಕಾರದವರು ನಿಮ್ನ ತರಗತಿಯವರ ಅಭಿವೃದ್ಧಿಗಾಗಿ ಸಂಸ್ಥಾನದಲ್ಲಿ ಏರ್ಪಡಿಸಿಕೊಟ್ಟಿರುವ ಸೌಲಭ್ಯಗಳನ್ನು ಅನುಸರಿಸಿಕೊಂಡು ಈ ಜನಾಂಗದವರು ಮುಂದುವರಿಯುತ್ತಾ ಇರುವುದರಿಂದ, ಈಗಾಗಲೇ ಇರತಕ್ಕ ಸೌಲಭ್ಯಗಳಿಗಿಂತ ಮಿಗಿಲಾದ ಮಟ್ಟದಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರತಕ್ಕವರಾಗಿದ್ದಾರೆ. ಸಂಸ್ಥಾನದಲ್ಲಿರತಕ್ಕ ಸುಮಾರು 61 ಹಾಸ್ಟಲುಗಳಲ್ಲಿ ಈ ಎಲ್ಲ ವಿದ್ಯಾರ್ಥಿಗಳಿಗೂ ಕೂಡ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಟ್ಟು ವಿದ್ಯಾಭ್ಯಾಸಕ್ಕಾಗಿ ಸಹಾಯಮಾಡುವುದು ಬಹಳ

ಕಷ್ಟವಾಗಿದೆ. ಕಾಲೇಜು ವಿದ್ಯಾಭ್ಯಾಸದ ಮಟ್ಟದಲ್ಲಿ ಈ ಸಲ ನ ಮಾರು ಒಂದು ಸಾವಿರ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಒದಗಿಸಬೇಕಾಗಿದ್ದುದು ಕೇವಲ ¼ ಭಾಗಕ್ಕೆ ಮಾತ್ರ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಾಯಿತು. ಇಂಥ ಸಂದರ್ಭದಲ್ಲಿ, ಸರ್ಕಾರದವರು ತಮ್ಮ ಕೈಗಾರಿಕಾ ನೀತಿಗನುಸಾರವಾಗಿ ಕೃಷ್ಣರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್, ಮತ್ತು ರೈಲ್ವೆ ವರ್ಕ್‌ಷಾಪ್, ಮೋಟಾರ್ ಬಾಡಿ ಬಿಲ್ಡಿಂಗ್ ವರ್ಕ್‌ಷಾಪ್ ಎಂದು ಹೇಳಿ ಕೈಗಾರಿಕೆಗಳಲ್ಲಿ ತರಬೇತು ಕೊಡತಕ್ಕ ಇನ್‌ಸ್ಟಿಟ್ಯೂಟ್‌ಗಳು ಕೂಡ ಹುಟ್ಟಿಕೊಂಡು ಅಲ್ಲಿ ನಮ್ಮವರು ಅನೇಕ ಹುಡುಗರಿದ್ದಾರೆ. ಜೊತೆಗೆ ಕೇಂದ್ರ ಸರ್ಕಾರದವರು ಮೈಸೂರು ದೇಶದಲ್ಲಿ ಏರ್ಪಡಿಸಿರತಕ್ಕ ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿ, ಹಿಂದೂಸ್ಥಾನ್ ಏರ್‌ಕ್ರಾಫ್ಟ್, ಮೆಷಿನ್ ಟೂಲ್ಸ್ ಫ್ಯಾಕ್ಟರಿಗಳು ಕೂಡ ಇವೆ. ಈಗ ಹಾಲಿ ಇರತಕ್ಕಂಥ ಸರ್ಕಾರಿ ಹಾಸ್ಟಲ್‌ಗಳಲ್ಲಿಯಾಗಲಿ, ಏಡೆಡ್ ಹಾಸ್ಟಲ್‌ಗಳಲ್ಲಿಯಾಗಲಿ ಸಾಮಾನ್ಯವಾಗಿ ಓದತಕ್ಕ ವಿದ್ಯಾರ್ಥಿಗಳಿಗೆ ವಸತಿ ಮತ್ತು ಇತರ ಸೌಕರ್ಯಗಳನ್ನು ಒದಗಿಸಿಕೊಡುವುದು ಬಹಳ ಕಷ್ಟವಾಗಿ ಪರಿಣಮಿಸಿದೆ. ಹೀಗಿರುವಾಗ ಟೆಕ್ನಿಕಲ್ ವಿದ್ಯಾಭ್ಯಾಸದ ವಿದ್ಯಾರ್ಥಿಗಳಿಗೆ ದೊರೆಯತಕ್ಕ ಸೌಲಭ್ಯಗಳು ಮತ್ತೂ ಕಷ್ಟವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ಹೀಗಾಗಿ ಹಾಲಿ ಮೈಸೂರು ದೇಶದಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಮತ್ತು ಇತರ ಸಾರಿಭಾಷಿಕ ಶಿಕ್ಷಣ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಸರಿಯಾಗಿ ವ್ಯಾಸಂಗ ನಡೆಸುವುದಕ್ಕೆ ಕಷ್ಟವಾಗಿದೆ. ಈ ವಿದ್ಯಾರ್ಥಿಗಳು ಪಠ್ಯಪುಸ್ತಕಗಳನ್ನು ಕೂಡ ಕೊಂಡುಕೊಳ್ಳುವುದು ಕಷ್ಟವೆಂದು ಹೇಳಿ ಸರ್ಕಾರದವರು ಸೆಂಟ್ರಲ್ ಕಾಲೇಜು ಮತ್ತು ಮಹಾರಾಜಾ ಕಾಲೇಜು ಇಂಥ ಕಡೆಗಳಲ್ಲಿ ತಕ್ಕಮಟ್ಟಿಗೆ ಪಠ್ಯಪುಸ್ತಕಗಳನ್ನು ಅವರಿಗಾಗಿ ಕೊಂಡಿಟ್ಟು ಸಹಾಯ ಮಾಡುವ ವ್ಯವಸ್ಥೆಯೇನೋ ಮಾಡಿದ್ದಾರೆ. ಆದರೆ ಟೆಕ್ನಿಕಲ್ ವಿದ್ಯಾಭ್ಯಾಸದಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಇಂಥ ಸೌಲಭ್ಯಗಳಿಲ್ಲದೆ, ಅದಕ್ಕೆ ಸರಿಯಾಗಿ ನಮ್ಮವರಿಗೆಂದು ಸೇಕಡ 15-20 ಸ್ಥಾನಗಳನ್ನು ಈ ಶಾಲಾ ಕಾಲೇಜುಗಳಲ್ಲಿ ಮೀಸಲಾಗಿಟ್ಟಿದ್ದರೂ, ಅವರಿಗೆ ದೊರೆಯುವ ವಿದ್ಯಾರ್ಥಿವೇತನವಾಗಲಿ, ಅಥವಾ ಅವರ ತಂದೆ ತಾಯಿಗಳಿಂದ ಬರುವ ಸಹಾಯವಾಗಲಿ ಸಾಕಾದಷ್ಟಿಲ್ಲದಿರುವುದರಿಂದ ಬಹುಭಾಗ ವಿದ್ಯಾರ್ಥಿಗಳು ಸಂಪೂರ್ಣವಾಗಿ ಈ ಟೆಕ್ನಿಕಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವುದಕ್ಕಾಗದೆ ಮಧ್ಯೆ ಮಧ್ಯೆ ಬಿಟ್ಟು ಬಿಡುತ್ತಾರೆ. ಈಗ ಬೆಂಗಳೂರಿನಲ್ಲಿರುವ 16-17 ಹಾಸ್ಟಲುಗಳಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ಟೆಕ್ನಿಕಲ್ ವಿದ್ಯಾಭ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಒಂದೊಂದರಲ್ಲೂ ಮೂರು-ನಾಲ್ಕು ಜನರಂತೆ ಇಟ್ಟರೆ ಅವರಿಗೆ ಬೇಕಾದ ಪಠ್ಯಪುಸ್ತಕಗಳನ್ನಾಗಲಿ, ಇನ್‌ಸ್ಟ್ರುಮೆಂಟುಗಳನ್ನಾಗಲಿ ಅಲಾಯಿದ ಎಲ್ಲಾ ಹಾಸ್ಟಲುಗಳಲ್ಲಿಯೂ ಇಡುವುದು ಕಷ್ಟ. ಹಾಗೆ ಮಾಡುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆಯನ್ನು ಕೂಡ ಮಾಡಿಲ್ಲ. ಆದ್ದರಿಂದ ಈಗ ನಮ್ಮ ಮುಂದಿರತಕ್ಕ ನಿರ್ಣಯದಲ್ಲಿ ನಾನು ಎರಡು ಅಂಶಗಳನ್ನು ಸರ್ಕಾರದವರ ಮುಂದೆ ನಿವೇದಿಸಿಕೊಳ್ಳುತ್ತಿದ್ದೇನೆ. ಒಂದನೆಯದು, ಸರ್ಕಾರದವರು ಈ ಹಾಸ್ಟಲುಗಳಿಗೆ ಕೊಂಚ ದ್ರವ್ಯ ಒದಗಿಸಿ ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯ ಪುಸ್ತಕಗಳನ್ನೂ ಮತ್ತು Instrumentsಗಳನ್ನೂ ಕೊಂಡು ತಂದು ಒಂದು ಕಡೆ ಇಡಬೇಕಾದ ಪ್ರಮೇಯವಿದೆ. ಹತ್ತಾರು ಹಾಸ್ಟಲುಗಳಿದ್ದರೆ, ಎಲ್ಲಕ್ಕೂ ಈ ರೀತಿ ಮಾಡುವುದಕ್ಕಾಗುವುದಿಲ್ಲ. ಯಾವುದೇ ಒಂದು ಹಾಸ್ಟಿಲಿನಲ್ಲಿಟ್ಟರೂ ಹತ್ತಾರು ಹಾಸ್ಟಲುಗಳವರು ಬಂದು ಅದರ ಉಪಯೋಗ ಹೊಂದುವುದು ಕಷ್ಟ. ಈ ಕಷ್ಟ ನಿವಾರಣೆ ಮಾಡಬೇಕಾದರೆ ಟೆಕ್ನಿಕಲ್ ವಿದ್ಯಾ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆಂದೇ ಒಂದು ಹಾಸ್ಟಲನ್ನು ತೆಗೆದರೆ, ಈಗ ಸರ್ಕಾರದವರು ಕೊಡುತ್ತಿರುವ ಸೌಲಭ್ಯವನ್ನೂ ಅವರಿಗೆ ಒದಗಿಸುವುದಕ್ಕೆ ಸುಲಭವಾಗುತ್ತದೆ.

ಎರಡನೆಯದಾಗಿ, ಈಗ ತಮಗೆಲ್ಲಾ ಗೊತ್ತಿರುವಂತೆ ಸರ್ಕಾರಿ ಕೈಗಾರಿಕೋದ್ಯಮಗಳಲ್ಲಿ ಅರ್ಜಿಗಳನ್ನು ನೇರವಾಗಿ ತೆಗೆದುಕೊಂಡು ಕೆಲಸಗಳನ್ನು ಕೊಡುತ್ತಿದ್ದಾರೆ. ನಿಮ್ಮ ತರಗತಿಯವರಿಗಾಗಿ ಶೇಕಡ 15 ಸ್ಥಾನಗಳನ್ನು ಅವರು ಕೊಡುವವರಾಗಿದ್ದಾರೆ. ಆದರೆ ಅವರು ಅಪ್ರೆಂಟಿಸ್ ಆಗಿರುವವರಿಗೆ preference ಕೊಡುತ್ತಾರೆ. ನಮ್ಮ ಜನರು ಆ ಕೈಗಾರಿಕೆಗಳವರು ಕೊಡುವ trainingನ್ನು ಪಡೆಯಲು ಅನುಕೂಲತೆಗಳಿಲ್ಲದಿರುವುದರಿಂದ ಅನೇಕರಿಗೆ ಈ ಶೇಕಡ 18 ಹುದ್ದೆಗಳೂ ಸಿಕ್ಕದಂತಾಗಿವೆ. ಹೀಗಾಗಿ ಶೇಕಡ 18 ಸ್ಥಾನಗಳನ್ನು ನಿಮ್ಮ ತರಗತಿಯವರಿಗೆ ಕೊಡಬೇಕೆಂಬ ಗುರಿ ಬರೀ ಕಾಗದದ ಮೇಲಿದೆಯೇ ಹೊರತು ಕಾರ್ಯರೂಪದಲ್ಲಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ.

ಈಗ ಇಂಡಿಯಾ ಸರ್ಕಾರದವರು ನಾನು ಹೇಳಿದಂತೆ ಇಂಡಸ್ಟ್ರಿಯಲ್ ಹಾಸ್ಟಲುಗಳನ್ನು ತೆರೆಯುವುದಾದರೆ ಅದಕ್ಕಾಗಿ ಹೆಚ್ಚಿನ ಗ್ರಾಂಟ್ ಕೊಡುವವರಾಗಿದ್ದಾರೆ. ಮೈಸೂರಲ್ಲದೆ ಇತರ ಭಾಗಗಳಲ್ಲಿ ಆಗಲೇ ಈ ಪ್ರಕಾರ ಇಂಡಿಯಾ ಸರ್ಕಾರದಿಂದ ಲಾಭ ಪಡೆದು ಇಂಡಸ್ಟ್ರಿಯಲ್ ಹೋಮ್, ಇಂಡಸ್ಟ್ರಿಯಲ್ ಹಾಸ್ಟಲುಗಳನ್ನು ಏರ್ಪಡಿಸಿದ್ದಾರೆ. ಇವುಗಳನ್ನು ಏರ್ಪಾಡು ಮಾಡುವುದರಿಂದ ಸಂಸ್ಥಾನದ ಸರ್ಕಾರದ ಮೇಲೆ ಹೊರೆ ಅಷ್ಟಾಗಿ ಇಲ್ಲ. ಅವರೇನಿದ್ದರೂ ಒಂದು ಸ್ಕೀಮ್ ತಯಾರಿಸಿ ಇಂಡಿಯಾ ಸರ್ಕಾರದವರಿಗೆ ಬರೆಯಬೇಕು ಅಷ್ಟೆ. ಆ ಸ್ಕೀಮಿಗನುಸಾರವಾಗಿ ಇಂಡಿಯಾ ಸರ್ಕಾರದವರು ಗ್ರಾಂಟ್ ಕೊಡಲು ಸಿದ್ಧವಾಗಿದ್ದಾರೆ. ಏನಿದ್ದರೂ ಸರ್ಕಾರ initiative ತೆಗೆದುಕೊಂಡು ಇಂಥ ಕಷ್ಟಗಳಿರುವುದರಿಂದ ಈ ರೀತಿಯ ಹಾಸ್ಟೆಲುಗಳನ್ನು ತೆರೆಯುವುದು ಅನಿವಾರ್ಯವಾಗಿದೆಯೆಂದು ತಿಳಿಸಬೇಕು ಅಷ್ಟೆ. ಅದಕ್ಕೆ ಬೇಕಾದ ದುಡ್ಡು ನಿಮಗೆ ಒದಗಿ ನಿಮ್ಮ ಕಾರ್ಯ ಸಾಧನೆ ಆಗುತ್ತದೆ.

ಈ ನಿರ್ಣಯದಲ್ಲಿ ಷೆಡ್ಯೂಲ್ಡ್ ಜಾತಿಯ ವಿದ್ಯಾರ್ಥಿಗಳಿಗೆ ಎಂದು ಅಳವಡಿಸಿದ್ದೇನೆ. ಆದರೆ ಸರ್ಕಾರದವರು ಈಗಾಗಲೇ ಒಂದು ನೀತಿಯನ್ನು ಪ್ರತಿಪಾದಿಸಿ ನಮ್ಮ ಹಾಸ್ಟಲುಗಳನ್ನೂ ಸಾರ್ವಜನಿಕ ಹಾಸ್ಟಲುಗಳೆಂದು ಮಾಡಿ ಎಲ್ಲರಿಗೂ ಸೌಲಭ್ಯವಿರುವ ಹಾಸ್ಟಲುಗಳೆಂದು ಮಾಡಬೇಕೆಂದು ದೇಶದ ಮುಂದೆ ಇಟ್ಟಿದ್ದಾರೆ. ಆದ್ದರಿಂದ, ಆ ಹಾಸ್ಟಲುಗಳಲ್ಲಿಯೇ ಈ ವಿದ್ಯಾರ್ಥಿಗಳೂ ಇರಬಹುದು ಎಂದು ಹೇಳಬಹುದು. ಆದರೆ ನಾನೀಗ ಹೇಳುವ ಯೋಜನೆಯು ಹೊಸದು. Industrial ಹಾಸ್ಟಲುಗಳೆಂಬವು ಹಾಲಿ ದೇಶದಲ್ಲಿ ಒಂದೂ ಇಲ್ಲ. ಒಂದೂ ಅಂಥ ಹಾಸ್ಟಲುಗಳಿಲ್ಲದಿರುವಾಗ, ಈಗ ಹೊಸದಾಗಿ ಪ್ರಾರಂಭ ಮಾಡುವಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರಿಗೆಂದು ಪುರು ಮಾಡಿದರೆ ಮೈಸೂರು ಸರ್ಕಾರದವರಿಗೆ ಬೀಳುವ ಖರ್ಚು ಬಹಳ ಕಡಮೆ ಆಗುತ್ತದೆ. ಏಕೆಂದರೆ, Government of India have schemes for spending enormous amounts and they are going to

(ಶ್ರೀ ಕೆ. ಪ್ರಭಾಕರ್.)

provide a lot of money, provided the local Governments undertake the burden of initiating and running the hostels on experimental basis. ಬೇಗ ಈ ಅನುಕೂಲವನ್ನು ಪಡೆಯುವುದಕ್ಕೆ ಅವಕಾಶವಿದೆಯೆಂದು ಹೇಳಿ experimental ಆಗಿ ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಮಾಡಿಕೊಡಿ ಎಂದು ಕೇಳುವ ಉದ್ದೇಶವನ್ನು ಸೂಚಿಸಿ, ಆ tone ಕೊಟ್ಟು ಈ ತರಾವನ್ನು ತಮ್ಮ ಮುಂದಿಟ್ಟಿದ್ದೇನೆ ಅಷ್ಟೆ. ಈಗ ಕೈಗಾರಿಕಾ ಮಂತ್ರಿಗಳಾದ ಶ್ರೀಮಾನ್ ಚೆನ್ನಬಸಪ್ಪನವರು ಈ ಖಾತೆಯನ್ನು ಹೊಸದಾಗಿ ವಹಿಸಿಕೊಂಡಿರುವವರಾಗಿದ್ದಾರೆ. ಹತ್ತಾರು ಕೆಲಸಗಳನ್ನು ಬಹಳ ಹುರುಪಿನಿಂದ ಮಾಡಬಲ್ಲವರಾಗಿದ್ದಾರೆ. ಹಿಂದೆಯೂ ಅನೇಕ ಜನ ಮಹನೀಯರು ತಮ್ಮ ತಮ್ಮ ಕಾಲದಲ್ಲಿ ಒಂದೊಂದು ಗುರುತರವಾದ ಸಹಾಯವನ್ನು ಮಾಡಿಕೊಟ್ಟು ಅವರ ಹೆಸರುಗಳನ್ನು ಚಿರಸ್ಮರಣೀಯವಾಗಿ ಮಾಡಿರುವಂಥ ನಿದರ್ಶನಗಳಿವೆ. ಡಾ॥ ಸಿ. ಆರ್. ರೆಡ್ಡಿಯವರು ನಿಮ್ಮ ವರ್ಗದವರ ವಿದ್ಯಾರ್ಥಿಗಳಿಗೆ, ಈ ಜನಾಂಗದವರ ವಿದ್ಯಾಭ್ಯಾಸಕ್ಕಾಗಿ ಮಾಡಿದಂಥ ಯೋಜನೆ ಆ ಜನರು ಅವರನ್ನು ಆಚಂದ್ರಾರ್ಕವಾಗಿ ಸ್ಮರಣೆ ಮಾಡುವಂತೆ ಮಾಡಿಲ್ಲವೇ? ಹಾಗೆಯೇ ನಮ್ಮ ಈ ಕೈಗಾರಿಕಾ ಮಂತ್ರಿಗಳೂ—ಅವರು ಬಹಳ ಉತ್ಸಾಹಶಾಲಿಗಳು—ಅವರು ಮೈಸೂರು ದೇಶದ ಇಡೀ ಜನತೆ ಸುಖ ಸಂತೋಷಗಳನ್ನು ಅನುಭವಿಸುವ ಹಾಗೆ ಮಾಡಬೇಕೆಂದಿದ್ದಾರೆ—ಅಂಥ ಆದರ್ಶ ಹೊಂದಿರುವ ವ್ಯಕ್ತಿಗಳು ಈ ಸಂದರ್ಭದಲ್ಲಿ ನಿಮ್ಮ ತರಗತಿಯವರಿಗಾಗಿ Industrial Hostels ಎಂದು ಪ್ರಯೋಗಿಕವಾಗಿ ತೆರೆದು ಸಹಾಯ ಮಾಡಲೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇದು ಕೈಗಾರಿಕಾ ಮಂತ್ರಿಗಳಿಗೆ ಸಂಬಂಧಿಸಿದ ಹಾಗೆ ಕಾಣುವುದಿಲ್ಲ; ವಿದ್ಯಾಮಂತ್ರಿಗಳಿಗೆ ಸಂಬಂಧಪಟ್ಟದ್ದು.

ಶ್ರೀ ಕೆ. ಪ್ರಭಾಕರ್.—All right, ಆ ವಿಷಯವನ್ನು ಬೇಕಾದರೆ ನಾನು ತಿದ್ದಿಕೊಳ್ಳಲು ಒಪ್ಪಿದ್ದೇನೆ.

ಈಗ ಮೈಸೂರು ಸಂಸ್ಥಾನದಲ್ಲಿ ಸರ್ಕಾರದವರು ಪ್ರೇರುಗಳನ್ನು ಹೊಂದಿರುವ ಕೆಲವು ಕೈಗಾರಿಕೆಗಳಿವೆ. ಅವುಗಳಲ್ಲಿಯೂ ಕೂಡ ಕೆಲಸಗಳನ್ನು ಕೊಡಬೇಕಾದರೆ ಮೊದಲು ಟ್ರೈನಿಂಗ್ ಆಗಿರಬೇಕೆಂದು ಕೇಳುತ್ತಾರೆ. ಆ ಉದ್ದೇಶದಿಂದಲೇ ಸರ್ಕಾರದವರು ಏರ್ಪಡಿಸಿರುವ ಸರ್ವೆಯರ್‌ಗಳ ಟ್ರೈನಿಂಗ್, ವೆಟರಿನರಿ ಕಾಂಪೌಂಡರುಗಳ ಟ್ರೈನಿಂಗ್ ಮುಂತಾದುವುಗಳಲ್ಲಿ ಟ್ರೈನಿಂಗ್ ತೆಗೆದುಕೊಳ್ಳಬೇಕಾದರೆ, ಆ ಟ್ರೈನಿಂಗ್ ಕಾಲದಲ್ಲಿ ಹಾಸ್ಟಲುಗಳಲ್ಲಿ ಇರಬೇಕಾಗುತ್ತದೆ. ಇದಕ್ಕೆಲ್ಲಾ ಅನುಕೂಲವಾಗಬೇಕಾದರೆ, ಸರ್ಕಾರದವರು ಉಚಿತವಾಗಿ ಇಂಡಸ್ಟ್ರಿಯಲ್ ಹಾಸ್ಟಲುಗಳನ್ನು ತೆರೆದು ಸಹಾಯ ಮಾಡಬೇಕು. ಇದರಿಂದ ನಮ್ಮ ಜನಾಂಗಕ್ಕೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆ. ಹೆಚ್ಚಿಗೆ ದುಡ್ಡೂ ಖರ್ಚಾಗುವುದಿಲ್ಲವೆಂದು ನಿವೇದಿಸಿಕೊಳ್ಳುತ್ತಾ ನನ್ನ ನಿರ್ಣಯವನ್ನು ಸಭೆಯವರ ಒಪ್ಪಿಗೆಗೆ ಇಡುತ್ತೇನೆ.

Mr. DEPUTY SPEAKER.—Resolution moved :

"This Assembly is of the opinion that Hostels be started for Scheduled Caste students undertaking industrial and technical studies."

*ಶ್ರೀ ಎಂ. ಮಾದಯ್ಯ (ನಂಜನಗೂಡು-ಅನುಸೂಚಿತ ಜಾತಿಗಳು).—ಸ್ವಾಮಿ, ಈ ನಿರ್ಣಯದಲ್ಲಿ ನಿಮ್ಮ ತರಗತಿಯವರಿಗೆ ಮತ್ತು ಷೆಡ್ಯೂಲ್ಡ್ ಪಂಗಡದವರಿಗೆ ಕೈಗಾರಿಕಾ ವಿದ್ಯಾಭ್ಯಾಸ ಕೊಡುವುದಕ್ಕನುಕೂಲವಾಗುವುದಕ್ಕಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡಿಕೊಡಬೇಕೆಂದು ಕೇಳಿದ್ದಾರೆ. ಇದನ್ನು ಕೇಳುವಾಗ ಸರ್ಕಾರದವರ ಅಭಿಪ್ರಾಯವೇನಿದೆ ಅನ್ನುವುದನ್ನು ನಾನು ಒತ್ತಾಯಮಾಡಿ ಕೇಳಿ ತಿಳಿದುಕೊಳ್ಳಬೇಕೆಂದಿದ್ದೇನೆ. ಡಿಪ್ರೆಸ್ಡ್ ಕ್ಲಾಸಿನವರಿಗೆ ಪ್ರಾಸಂಗಿಕವಾಗಿ ಏನಾದರೂ ಅನುಕೂಲಪಡಿಸಿಕೊಡಿ ಎಂದು ಕೇಳಿದರೆ ಹಾಗೆಲ್ಲಾ ಕೇಳಬಾರದು, ಅದು ಕೋಮುವಾರು ಭಾವನೆ ಆಗುತ್ತದೆ ಎಂದು ಹೇಳುತ್ತಾರೆ. ಈ ರೀತಿಯ ವಾದ ಇತ್ತೀಚೆಗೆ ಕೆಲವು ಕ್ವಾರ್ಟರ್ಸ್‌ಗಳ ಕಡೆಯಿಂದ ಬರುತ್ತಿದೆ. ಆದರೆ ಈ ವಿಚಾರವನ್ನು ಕೇಳುತ್ತಿರುವುದರ ಉದ್ದೇಶ ಏನೆಂಬುದನ್ನು ಸ್ಪಷ್ಟವಾಗಿ ವಿಶದೀಕರಿಸದಿದ್ದರೆ ಅದು ತಪ್ಪು ಭಾವನೆಗೆ ಅವಕಾಶ ಕೊಡುತ್ತದೆ. ಆದುದರಿಂದ ನಾನು ಯತ್ನವಿಲ್ಲದೆ ವಿಶದೀಕರಿಸಬೇಕಾಗಿ ಬಂದಿದೆ. ಇದಕ್ಕಾಗಿ ಯಾರೂ ತಪ್ಪಾಗಿ ಭಾವಿಸಬಾರದು. ಈ ಡಿಪ್ರೆಸ್ಡ್ ಕ್ಲಾಸಿನವರಿಗೆ ಅನುಕೂಲಪಡಿಸಿಕೊಡಬೇಕೆಂದು ಕೇಳುತ್ತಿರುವ ಸಂದರ್ಭ ಯಾವುದೆಂದರೆ, ಎಲ್ಲರಿಗೂ ಊಟಕ್ಕೆ ಬಡಿಸುತ್ತಿದ್ದಾಗ ಈ ಊಟವಿಲ್ಲದೆ ಇರತಕ್ಕಂಥ ಡಿಪ್ರೆಸ್ಡ್ ಕ್ಲಾಸಿನ ಮಕ್ಕಳಿಗೂ ಊಟಕ್ಕೆ ಬಡಿಸಿ ಎಂದು ಕೇಳಿದರೆ ಇದೊಂದು ಕೋಮುವಾರು ಭಾವನೆಯಾಗುತ್ತದೆಯೆನು? ಇದೆಂದಿಗೂ ಕೋಮುವಾರು ಭಾವನೆಯೆನಿಸಿಕೊಳ್ಳುವುದಿಲ್ಲ.

ಉಪಾಧ್ಯಕ್ಷರು.—ಆ ರೀತಿಯಾಗಿ ಯಾರೂ ಹೇಳಲಿಲ್ಲವಲ್ಲಾ!

ಶ್ರೀ ಎಂ. ಮಾದಯ್ಯ.—ನಾನು ಏನು ಹೇಳುತ್ತಿದ್ದೇನೋ ಅದನ್ನು ಬಹಳ ಜವಾಬ್ದಾರಿಯನ್ನರಿತು ಹೇಳುವುದಕ್ಕೆ ನಿಂತಿರುವಾಗ ಸರ್ಕಾರದವರು ಅದನ್ನು ದಯವಿಟ್ಟು ಲಾಲನಬೇಕು. ನಾವು ದೇಶಕ್ಕೆ ಸಂಬಂಧಪಟ್ಟಹಾಗೆ ಯಾವುದಾದರೂ ಒಂದು ಪ್ರಶ್ನೆಯನ್ನು ಜವಾಬ್ದಾರಿಯಿಂದ ಕೇಳುವಾಗ ಕೆಲವನ್ನು ಎಲ್ಲಾ ಕೋಮುಗಳಿಗೂ ಸಂಬಂಧಪಟ್ಟಹಾಗೆ ಕೇಳಬೇಕಾಗುತ್ತದೆ. ಮತ್ತೆ ಕೆಲವು ವಿಚಾರಗಳನ್ನು ಹರಿಜನರಿಗೇ ಸಂಬಂಧಪಟ್ಟಿರುವ ಹಾಗೂ ಕೇಳಬೇಕಾಗಿ ಬರುತ್ತದೆ. ಹಾಗೆ ನಾನು ಕೇಳಿದ ಅನೇಕ ಸಂದರ್ಭಗಳಲ್ಲಿ ನನ್ನ ಕೇಳಿಕೆಗಳನ್ನು, ಸಂಪೂರ್ಣವಾದ ನಿರ್ಲಕ್ಷ್ಯ ಮನೋಭಾವದಿಂದ ನೋಡಿದ್ದಾರೆ. ಆ ಒಂದು ಭಾವನೆಯನ್ನು ನಾನೀಗ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಆದಾಗ್ಯೂ ರಾಜ್ಯಾಂಗದಲ್ಲಿ ಈ ಡಿಪ್ರೆಸ್ಡ್‌ಕ್ಲಾಸಿನವರಿಗೆ ಮತ್ತು ನಿಮ್ಮ ಪಂಗಡದವರಿಗೆ ಏನೇನು ರಿಯಾಯಿತಿಗಳನ್ನು ತೋರಿಸಬೇಕೆಂದು ಹೇಳಲಾಗಿದೆಯೋ ಅವುಗಳನ್ನಾದರೂ ತೋರಿಸಬೇಕೆಂದು ಕೇಳಿದರೆ ಇದು ಕೋಮುವಾರು ಭಾವನೆಯಾಗುವುದಿಲ್ಲ. ಹರಿಜನರನ್ನೂ ಹಿಂದುಳಿದಿರತಕ್ಕವರನ್ನೂ ಮುಂದಕ್ಕೆ ತನ್ನಿ ಅಂದರೆ. . . .

Sri D. DEVARAJA URS (Hunsur).—My friend is presuming that some body has stated that it is based on communal ground. Nobody has said so. Why should he go on arguing a thing which is not existing before the House? Let him convince the House about the feasibility of starting these Hostels.

Mr. DEPUTY SPEAKER.—It is better to avoid unnecessary controversies.

Sri M. MADIAH.—If it is anything against the Rules of Procedure, of course, I will have to obey the Chair.

Mr. DEPUTY SPEAKER.—Better you confine yourself to the subject-matter before us now.

ಶ್ರೀ ಎಂ. ಮಾದಯ್ಯ.—ಸಾಧ್ಯವಾದಮಟ್ಟಿಗೂ ಇದನ್ನು ವಿಶದೀಕರಣ ಮಾಡುವುದಕ್ಕಾಗಿಯೇ ನಾನು ಎದ್ದು ನಿಂತಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಸರ್ಕಾರದವರು ನಾಳೆ ಯಾವುದಾದರೂ ಸಂದರ್ಭದಲ್ಲಿ ಹರಿಜನರು ಎಂದು ನೀವು ಎಲ್ಲಾ ವಿಚಾರಗಳಲ್ಲೂ ಪದೇ ಪದೇ ಕೇಳಬಾರದು ಎಂದು ಏನಾದರೂ. . . .

ಶ್ರೀ ಟಿ. ಹನುಮಯ್ಯ (ಹರಿಯೂರು ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಮಾತನಾಡುತ್ತಿರುವ ಮಾನ್ಯನದನ್ಯರು ಯಾರೂ ಹೇಳದೆ ಇರುವಂಥಾದ್ದನ್ನು ಇನ್ನು ಮುಂದಕ್ಕೂ ಸಹ ಹೀಗೆ ಯಾರೂ ಹೇಳಿದಿರ ಲೆಂದು ಈಗ ಏನೇನೊ ಮನಸ್ಸಿನಲ್ಲಿ ಭಾವನೆ ಮಾಡಿ ಕೊಂಡು ಮಾತನಾಡುತ್ತಿದ್ದಾರೆ. ಅದು ಸರಿಯಲ್ಲ ವೆಂಬ ಅಂಶವನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಎಂ. ಮಾದಯ್ಯ.—ಈಗ ಅಥವಾ ನಾಳೆ ನಾವು ಷೆಡ್ಯೂಲ್ಡ್ ಕ್ಲಾಸಿನವರಿಗಾಗಿ ಒಂದು ಹಾಸ್ಟ ಲನ್ನು ಸರ್ಕಾರದವರು ತೆರೆಯಬೇಕೆಂಬುದಾಗಿ ಒತ್ತಾಯಪಡಿಸುತ್ತೇವೆಂದು ಇಟ್ಟುಕೊಳ್ಳೋಣ. ನಾಳೆ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿ ಕೋಮುವಾರು ಭಾವನೆಯೆಂದೆನಿಸಿಕೊಳ್ಳುವ ಹಾಸ್ಟ ಲುಗಳಿಗೆ ಸರ್ಕಾರ ಸಹಾಯ ಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಿದರೆ ಆಗೇನು ಮಾಡಬೇಕು? ಈ ವಿಷಯ ಇರತಕ್ಕ ರಾಜ್ಯಾಂಗದಲ್ಲಿ ಈ ನಿಮ್ನ ವರ್ಗದವ ರಿಗೂ ಮತ್ತು ಷೆಡ್ಯೂಲ್ಡ್ ಕ್ಲಾಸಿನವರಿಗೂ ಸ್ಪೆಷಲ್ ಪ್ರಾವಿಷನ್‌ಗಳನ್ನೇ ಮಾಡಿರುತ್ತಾರೆ. ಇವರಿಗೆ ವಿಶೇಷ ರಿಯಾಯಿತಿಗಳನ್ನು ತೋರಿಸಬೇಕೆಂದು ಹೇಳಿದೆ. ಹೀಗಿರುವಾಗ ಸರ್ಕಾರದವರು ಕೋಮುವಾರು ಹಾಸ್ಟಲುಗಳಿಗೆ ಸಹಾಯ ನೀಡುವುದಿಲ್ಲವೆಂದು ಹೇಳ ತಕ್ಕದ್ದು ಸರಿಯಾದದ್ದಲ್ಲ.

ಉಪಾಧ್ಯಕ್ಷರು.—ನೀವು ಇಲ್ಲಿಯವರೆಗೂ ಈ ನಿರ್ಣಯದಲ್ಲಿ ಹೇಳಿರತಕ್ಕ ಅಂಶಗಳಿಗೆ ಹೊಂದಿಕ್ಕೊಂಡು ಮಾತನಾಡಿರುವುದಿಲ್ಲ.

ಶ್ರೀ ಎಂ. ಮಾದಯ್ಯ.—ಸ್ವಾಮಿ, ಈ ಟೆಕ್ನಿಕಲ್ ಎಜುಕೇಷನ್ ವಿಚಾರದಲ್ಲಿ ಮಾತನಾಡುವಾಗ ನಮ್ಮಲ್ಲಿ ಇಂಜನಿಯರಿಂಗ್ ಸ್ಕೂಲಿದೆ, ಕಾಲೇಜಿದೆ. ಇನ್ನೂ ಅನೇಕ ಟೆಕ್ನಿಕಲ್ ಶಾಲೆಗಳಿರುತ್ತವೆ. ಹೀಗೆ ಎಲ್ಲೆಲ್ಲಿ ಈ ಟೆಕ್ನಿಕಲ್ ಶಾಲೆಗಳಿರುತ್ತವೆಯೋ ಅಲ್ಲಿ ಮಾತ್ರ ಈ ನಿಮ್ನ ವರ್ಗದ ಮಕ್ಕಳಿಗೆ ಒಂದೊಂದು ಹಾಸ್ಟಲನ್ನು ತೆರೆಯಬೇಕೆಂದು ಇದರಲ್ಲಿ ಕೇಳಿದ್ದಾರೆ. ಸರ್ಕಾರದವರು ಗಮನಿಸಬೇಕಾದಂಥ ಅಂಶವಾಗಿದೆ ಇದು. ಆದರೆ ಸರ್ಕಾರದವರು ಇಂಥ ಪರಿಹಾರವನ್ನು ಮಾತ್ರ ಕೊಡು ವುದಿಲ್ಲ. ಈ ಷೆಡ್ಯೂಲ್ಡ್ ಕ್ಯಾಸ್ಟುಗಳಿಗೆ ಗ್ಯಾಂಟು ಗಳನ್ನು ಕೇಳತಕ್ಕ ಸಂಬಂಧವಾಗಿ 1950ರಲ್ಲೇ ನಾನು ಒಂದು ನಿರ್ಣಯವನ್ನು ಆ ಪಾಲಸಿ ಸಮಿತಿಯವರಿಗೆ ಕಳುಹಿಸಿಕೊಟ್ಟಿದ್ದೆನು. ಆಗ ಅವರು ಅದೇ ನಿರ್ಣಯ ವನ್ನು ಆ ಫೈನಾನ್ಷಿಯಲ್ ಇಲಾಖೆಗೆ ಕಳುಹಿಸಿ ಕೊಟ್ಟರು. ಆದರೆ ಅದೇನೂ ಆಗಲೇ ಇಲ್ಲ. ಈ ಹಿಂದಿನಿಂದಲೂ ನಮ್ಮ ಸರ್ಕಾರದವರು 19 ಲಕ್ಷ ರೂಪಾಯಿಗಳ ಗ್ಯಾಂಟನ್ನು ನಮಗೆ ಕೊಡುತ್ತಿದ್ದರು. ಅದನ್ನೇ ನಾವು ಕಂಟಿನ್ಯೂ ಮಾಡಿಕ್ಕೊಂಡು ಬಂದಿ ದ್ದೇವೆ. ಈಗ ಇದನ್ನು ಎಜುಕೇಷನ್ ಹೆಡ್ಡಿನಿಂದ ತಪ್ಪಿಸಿದ್ದಾರೆ. ಮಲತಾಯಿಯು ಮಗುವನ್ನು ಕತ್ತ ರಿಸಬೇಕೆಂದರೆ ಹೆತ್ತತಾಯಿಯು ಬೇಡ ಅದಕ್ಕೆ ಬದಲು ನೀನೇ ಆ ಮಗುವನ್ನು ತೆಗೆದುಕೊಂಡು ಹೋಗೆಂದು ಹೇಳಿದಹಾಗೆ 10ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಈ ನಿಮ್ನ ವರ್ಗದವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಕೊಟ್ಟಿದ್ದರೆ ಅದಕ್ಕೆ ಇವರು ಈ 19ಲಕ್ಷ ರೂಪಾಯಿಗಳಲ್ಲಿ ಕೆಲವು ಭಾಗವನ್ನು ಹಾಕಿ ಈ ಮೊಬಲಗಿನಲ್ಲಿ ಕೋಲಾರದಲ್ಲಿ ಒಂದು ಹಾಸ್ಟ ಲನ್ನು ಕಟ್ಟಿಸಿದ್ದಾರೆ. ಆದರೆ ಅಲ್ಲಿ ಎಷ್ಟು ಜನ ಮಕ್ಕಳಿದ್ದಾರೆ, ಎಂಬುದೊಂದನ್ನೂ ಪರಿಗಣಿಸದೆ ಅದಕ್ಕೆ 3½ ಲಕ್ಷ ರೂಪಾಯಿಗಳನ್ನು ಕೊಟ್ಟು ಕಟ್ಟಿ ಸಿದ್ದಾರೆ. ಈಗ ಅದು it is going to be declared as a general hostel. ಈಗ ತಾವು ಇದನ್ನು ಜನರಲ್ ಹಾಸ್ಟಲನ್ನಾಗಿ ಪರಿವರ್ತಿಸುವು ದಾಗಿದ್ದರೆ ನಮ್ಮ ಡಿಪ್ರೆಸ್ಡ್ ಕ್ಲಾಸ್ ಎಮಿಲಿಯೋ ರೇಷನ್ ಫಂಡಿನಿಂದ ಖರ್ಚುಹಾಕಿರುವ ಹಣವನ್ನು ಮತ್ತೆ ನಿಮ್ಮ ತರಗತಿಗಳವರ ಮನೆಗಳನ್ನು ಕಟ್ಟಿಕೊಳ್ಳಲು ಕೊಡಬೇಕಾಗುತ್ತದೆ. ಈ ಹಣವನ್ನು ತಾವು ಈ ಹಾಸ್ಟಲಿಗಾಗಿ ಖರ್ಚುಮಾಡದೆ ಇದ್ದಿದ್ದರೆ ಈ ಮೊಬ ಲಗು ನಮ್ಮ ಎಮಿಲಿಯೋರೇಷನ್ ಫಂಡಿನಲ್ಲೇ ಉಳಿ ಯುತ್ತಿತ್ತು. ಇಷ್ಟೇ ಅಲ್ಲದೆ ಆಯಾ ವರ್ಷಕ್ಕೆಂದು ನಿಗದಿಯಾಗಿ ಬರತಕ್ಕ ಮೊಬಲಗನ್ನೂ ಸಹ ತಾವು ಸರಿಯಾಗಿ ಆಯಾ ವರ್ಷದಲ್ಲೇ ಅದನ್ನು ಖರ್ಚು ಹಾಕದೆ ಲ್ಯಾಪ್ಸ್ ಆಗುವುದಕ್ಕೆ ಅವಕಾಶ ಕೊಟ್ಟಿ ದ್ದೀರಿ. ಹೀಗೆ 25-30 ಲಕ್ಷ ರೂಪಾಯಿಗಳ ನಿಧಿ ಲ್ಯಾಪ್ಸಾಗಿ ಹೋಗಿದೆ. ನಮಗಾಗಿ ಖರ್ಚಾಗಿರು ವುದು ಕೇವಲ 10-15 ಲಕ್ಷ ಮಾತ್ರ; ಉಳಿದ ಹಣವೆಲ್ಲಾ ಲ್ಯಾಪ್ಸಾಗಿ ಹೋಯಿತು. ಇದೊಂದು ಇಂದ್ರಜಾಲ ಮಹೇಂದ್ರಜಾಲದಂತೆ ಮಾಡುತ್ತಿದ್ದೀರಿ. ಇನ್ನು ಈ ಟೆಕ್ನಿಕಲ್ ಶಾಲೆಗಳಿಗೆ ಸೀಟನ್ನು ಕೊಡುವುದರಲ್ಲಿ ಡಿಪ್ರೆಸ್ಡ್ ಕ್ಲಾಸ್ ಬಾಲಕರಿಗೆ ಶೇಕಡ 15ರಷ್ಟು ಸ್ಥಾನ ಗಳನ್ನು ಮಾತ್ರ ಕೊಟ್ಟಿದ್ದೀರಿ. ಹಲ್ಲು ಬಾರದಿದ್ದಾಗ ಕೊಟ್ಟ ಕಡಲೆಯನ್ನು ಹಲ್ಲು ಬಂದಮೇಲೆ ಕಿತ್ತುಕೊಂಡ ಹಾಗೆ ಮಾಡಿದ್ದೀರಿ. ಹೀಗೆಲ್ಲಾ ತಾವು ಡಿಪ್ರೆಸ್ಡ್ ಕ್ಲಾಸಿನ ಮಕ್ಕಳ ಪ್ರಗತಿಯನ್ನು ಸಾಧಿಸುವುದರಲ್ಲಿ ಪ್ರೋತ್ಸಾಹ ಸಾಕಷ್ಟು ನೀಡುತ್ತಿಲ್ಲ. . . .

Mr. DEPUTY SPEAKER.—You are an old Parliamentarian. I am sorry you are not confining yourself to the subject-matter before us.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).—ಸ್ವಾಮಿ, ನಾನು ಅಧ್ಯಕ್ಷರಾದ ತಮ್ಮ ಮುಂದೆಯೂ ಮತ್ತು ಸಭಾನಾಯಕರ ಮುಂದೆಯೂ ಒಂದು ವಿಷಯವನ್ನು ತರಬೇಕೆಂದಿದ್ದೇನೆ. ಇಲ್ಲಿ ನಮ್ಮ ಶ್ರೀ ಡಿ. ಎಂ. ಗೋವಿಂದರಾಜು ಅವರು ನಮ್ಮ ಡೂಪ್ಲಿಕೇಟ್ ನಾಯಕರಾಗಿದ್ದಾರೆ. ಇವರು ಬರು ತ್ತಿರುವಾಗ ಒಬ್ಬರು ಗಾಬರಿಯಿಂದ ಜಾರಿ ಬಿದ್ದು ಬಿಟ್ಟರು. ಅದಕ್ಕೆ ಈ ಇಬ್ಬರ ಹೈಕಿ ಯಾರಾದರೂ ಒಬ್ಬರು ಈ ಬಜೆಟ್‌ಗಳನ್ನು ಬದಲಾಯಿಸುವಂತೆ ತಾವು ಒಂದು ವಿಪರ್ಯಾಟು ಮಾಡಬೇಕಂಬುದೇ ನನ್ನ ವಿಚಾರ.

ಉಪಾಧ್ಯಕ್ಷರು.—ನಮ್ಮ ರೂಲ್ಸುಗಳಲ್ಲಿ ಅದಕ್ಕೆ ಯಾವ ಪ್ರಾವಿಜನ್ನನ್ನೂ ಅಡಕಮಾಡಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಕೆ. ಪ್ರಭಾಕರ್ ಅವರು ಈಗ ಸಭೆಯಮುಂದೆ ಮಂಡಿಸಿರತಕ್ಕ ನಿರ್ಣಯದ ಬಗ್ಗೆ ನನ್ನ ಸಂಪೂರ್ಣ ಅನುಮೋದನೆಯನ್ನು ನೀಡುತ್ತ ನಾನು ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈಗ ಮಾನ್ಯ ಸದಸ್ಯರು ಎತ್ತಿರತಕ್ಕಂಥ ಸಮಸ್ಯೆ ಏನೆಂದರೆ: ಇಂಡಿಯಾ ದೇಶದಲ್ಲಿ ಈ ಷೆಡ್ಯೂಲ್ಡ್ ಕ್ಯಾಸ್ಟಿನ ಜನಾಂಗಗಳವರಿಗಾಗಿ ಹಾಸ್ಟಲುಗಳನ್ನು ಕಟ್ಟಿಸಬೇಕೆಂಬುದು ಎಷ್ಟು ಅಗತ್ಯವಾದುದು ಎನ್ನತಕ್ಕಂಥ ಅಂಶವನ್ನು ನಾನು ಒತ್ತಾಯ ಮಾಡಬೇಕಾದ್ದೇನೂ ಇಲ್ಲ. 1939ನೆಯ ಇಸವಿಯಲ್ಲೇ ಇದನ್ನೆಲ್ಲಾ ಚರ್ಚೆಮಾಡಿ 50ಕ್ಕೆ 50ರಷ್ಟು ಈ ಜನರು ಅಭಿವೃದ್ಧಿಗೆ ಬರಬೇಕಾಗಿದ್ದರೆ ಇವರಿಗೆ ಈ ಹಾಸ್ಟಲುಗಳ ಅಗತ್ಯವೆಷ್ಟಿರುತ್ತದೆ ಎಂಬುದನ್ನು 1939ರಲ್ಲೇ ನಿರ್ಧರ ಮಾಡಿದ್ದಾರೆ. ಆದರೆ ಅದನ್ನು ಇಲ್ಲಿಯವರೆಗೂ ಕಾರ್ಯರೂಪಕ್ಕೆ ತಾರದಿರುವುದು ತುಂಬ ಶೋಚನೀಯ. ಈ ವಿಚಾರಕ್ಕೆ ಈಗಲಾದರೂ ನಮ್ಮ ಸರ್ಕಾರದವರು ಮನಸ್ಸುಮಾಡಿ ಈ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಈಗ ನಮ್ಮ ದೇಶದಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಈ ಟೆಕ್ನಿಕಲ್ ಶಾಲೆಗಳಲ್ಲಿ ಓದಿ ದೇಶಕ್ಕೆ ಒಂದು ಕೀರ್ತಿತರತಕ್ಕ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಿಲ್ಲ. ಈ S.S.L.C. ಪರೀಕ್ಷೆಯನ್ನು ಮುಗಿಸಿಕೊಂಡು ಬರತಕ್ಕಂಥ ವಿದ್ಯಾರ್ಥಿಗಳೇ ಈ ಟೆಕ್ನಿಕಲ್ ಶಾಲೆಗಳಲ್ಲಿ ಹೆಚ್ಚಾಗಿರುತ್ತಾರೆ. ಆದರೆ ತಾವು ಈ ಇಂಜನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಮೆಡಿಕಲ್ ಇತ್ಯಾದಿ ಕಾಲೇಜುಗಳಲ್ಲಿ ಸಾಕಷ್ಟು ಸ್ಕಾಲರ್‌ಷಿಪ್‌ಗಳನ್ನು ಕೊಡದೆ ಇರುವುದರಿಂದ, ಶ್ರೀ ಪ್ರಭಾಕರ್ ಅವರು ಹೇಳಿದಹಾಗೆ, ದೇಶದಲ್ಲಿ ಜನರು ಈ ವಿದ್ಯೆಯಲ್ಲಿ ಹಿಂದುಳಿಯಲು ಕಾರಣವಾಗಿ, ಈ ದಿವಸ ನಮ್ಮ ದೇಶದಲ್ಲಿ ನಡೆಯುತ್ತಿರುವ ಕೈಗಾರಿಕಾ ಕಾರ್ಖಾನೆಗಳಲ್ಲೂ ಮತ್ತು ನಮ್ಮ ಬೆಂಗಳೂರಿನಲ್ಲಿರುವ ಸರ್ಕಾರಿ 15-16 ಕಾರ್ಖಾನೆಗಳಲ್ಲೂ, ಟೆಲಿಫೋನ್ ಫ್ಯಾಕ್ಟರಿ, ಮೆಷೀನ್ ಟೂಲ್ಸ್ ಫ್ಯಾಕ್ಟರಿ, ಇತ್ಯಾದಿ, ಕಾರ್ಖಾನೆಗಳಲ್ಲೆಲ್ಲಾ ಹೊರಗಿನ ಜನರನ್ನೇ ತೆಗೆದುಕೊಳ್ಳುತ್ತಿದ್ದಾರೆ. ನಮ್ಮದೇಶದ ಜನ ಹೋದರೆ ನಿಮಗೆ ಈ ಬಾಬಿನಲ್ಲಿ ಸಾಕಷ್ಟು ಟ್ರೈನಿಂಗ್ ಆಗಿಲ್ಲವಾದ್ದರಿಂದ ನಿಮ್ಮನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ವೆಂದು ಹೇಳಿ ಹಿಂದಕ್ಕೆ ಕಳುಹಿಸುತ್ತಿದ್ದಾರೆ.

4 P.M.

ಹಿಂದೆ ಹೇಗೆ ಟ್ರೈನಿಂಗ್ ಕೊಡುತ್ತಿದ್ದರೋ ಹಾಗೇ ಈಗ ಈ ಡಿಪ್ರೆಸ್ಡ್ ಕ್ಲಾಸಿನ ಮಕ್ಕಳಿಗೆ, ಬಡವರಾಗಿರತಕ್ಕವರಿಗೆ ಸಾಕಷ್ಟು ಸ್ಕಾಲರ್‌ಷಿಪ್‌ಗಳನ್ನು ಕೊಟ್ಟು ಈ ಟೆಕ್ನಿಕಲ್ ಟ್ರೈನಿಂಗನೂ ಕೊಡಿಸಿ ಈ ಎಲ್ಲಾ ಇಂಡಸ್ಟ್ರಿಯಲ್ಸ್‌ಗಳಲ್ಲೂ ಇವರಿಗೆ ಕೆಲಸ ದೊರೆಯುವಂತೆ ಮಾಡಿದರೆ ಈ ಅಟಚಬಲಟ ಹೋದೀತೆಂದು ನಾನು ಆ ಡಿಪ್ರೆಸ್ಡ್ ಕ್ಲಾಸ್ ಸಮಿತಿಯವರಿಗೆ ಮನವಿಮಾಡಕೊಂಡಿದ್ದೇನೆ. ಆದ್ದರಿಂದ ಈ scholarshipನ್ನು ಪ್ರತ್ಯೇಕವಾಗಿ ಕೊಡುವುದಕ್ಕೆ ಬದಲು ಬೆಂಗಳೂರಿನಲ್ಲೋ ಅಥವಾ ಮೈಸೂರಿನಲ್ಲೋ ಕೈಗಾರಿಕೆಗಳನ್ನು Centralise ಮಾಡಿ ಯಾವ ಯಾವ ಕೈಗಾರಿಕೆಗಳಲ್ಲಿ ಯಾವ ಯಾವ ಹುಡುಗರನ್ನು ತೆಗೆದುಕೊಳ್ಳುತ್ತಾರೋ ಅಲ್ಲಿಗೆ ಎಲ್ಲಾ ಹುಡುಗರನ್ನು ಸೇರಿಸಿ ಒಂದು ಹಾಸ್ಟಲ್‌ನ್ನು ಮಾಡಿದ ಪಕ್ಷವಲ್ಲಿ ಹೆಚ್ಚಿಗೆ ಅನುಕೂಲವಾಗುತ್ತದೆ. ನಿರ್ದಿಷ್ಟವಾದ ಕಾಲದಲ್ಲಿ ಸ್ವಲ್ಪ training ಹೊಂದಿ ಮುಂದೆ ಅಭಿವೃದ್ಧಿ ಪಡೆದು ಸರ್ಕಾರದ ಕೆಲಸಕ್ಕೆ ಸಂಪೂರ್ಣವಾಗಿ ನಿಲ್ಲುವುದಕ್ಕೆ ಬದಲು ಸ್ವತಃ ಜೀವಮಾನಗಳನ್ನು ಕಲ್ಪಿಸುವುದು ಬಹಳ ಸಹಾಯವಾಗುತ್ತದೆ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಮುಖ್ಯಮಂತ್ರಿಗಳೂ ಮತ್ತು ಕೈಗಾರಿಕಾ ಮಂತ್ರಿಗಳು ಆದಷ್ಟು ಜಾಗ್ರತೆಯಾಗಿ ಅಂದರೆ ಡಿಸೆಂಬರ್ ಹೊತ್ತಿಗೆ ಹಾಸ್ಟಲನ್ನು ಪ್ರಾರಂಭಿಸುವುದಕ್ಕೆ ಸಹಾಯಮಾಡಿ, ಮುಖ್ಯವಾಗಿ trainingಗೆ ಹೋಗುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

Sri V. M. MASCARENHAS (St. John's Hill).—I am rather surprised that in the month of September 1955 my friend Sri Prabhakar should have thought it prudent to send resolution like this. There is a recent Government order disapproving in general communal hostels and in spite of it my friend should have brought such a resolution before this House, to me, it looks rather strange. I quite understand Sri Prabhakar's point of view that students belonging to Depressed Classses seeking admission to industrial schools and technical colleges are finding it difficult to get admissions in hostels. But if he had only said or moved a resolution in such a manner as to seek a larger number of seats in the existing hostels or in asking the Government to put up a new hostel with a view to make sure that students of Scheduled Castes invariably get seats in the school or college, I would have been the happiest man to support the resolution. To bring forth resolution favouring a communal hostel today I am afraid is not tenable. It is more surprising that two more members of the same group supported the resolution.

Sri M. MADIAH.—The Hon'ble Member has not taken note of the relevant article of the Constitution, namely, special concession.

Sri V. M. MASCARENHAS.—You are making a reference irrelevantly. The subject before the House is the question of having a hostel.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾವು separate hostelನ್ನು ಪ್ರೋತ್ಸಾಹ ಮಾಡುತ್ತಾ ಇಲ್ಲ. 1939ನೇ ಇಸವಿಯಿಂದ Industrial Training ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ. ಅಂಥ ಅವಕಾಶ ಇಲ್ಲದೆ ಇರುವ ದೆಸೆಯಿಂದ training sectionಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ. Communal hostel ಪ್ರಶ್ನೆ ಬರುವುದಿಲ್ಲ.

ಶ್ರೀ ವಿ. ಎಂ. ಮಾಸ್‌ಕೆರೆನ್‌ಹಾಸ್.—ನಿರ್ಣಯ training ಮೇಲೆ ಇಲ್ಲ. ಹಾಸ್ಟಲ್ ಮೇಲೆ ಇದೆ. Sri Prabhakar said that in the Government Industrial Training Institute which is run under the auspices of the Government of India, students of the Scheduled Castes are not being given seats unless they have had practical training or workshop training. I must say before this House that that impression is perfectly erroneous, because I am myself a Member of that Committee.

Sri K. PRABHAKAR.—I have to give him the correct information. I never said that admission was refused in the hostel.

Sri V. M. MASCARENHAS.—I am a member of the Committee who gave seats.

Mr. DEPUTY SPEAKER.—Is there any difficulty in securing admission to industrial schools?

ಶ್ರೀ ಕೆ. ಪ್ರಭಾಕರ್.—ನಾನು ಹೇಳಿದ Point ಅದಲ್ಲ. Training ಮಾಡಿಕೊಂಡಿದ್ದರೆ, ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿ ಸೀಟುಗಳನ್ನು ಕೊಡುತ್ತಾರೆ. Training ಮಾಡಿಕೊಳ್ಳುವುದಕ್ಕೆ ಹಾಸ್ಟಲುಗಳು ಬೇಕು. ಸಂಸ್ಥಾನದಲ್ಲಿ ಕೈಗಾರಿಕೆಯಲ್ಲಿ training ಕೊಡುವ ಹಾಸ್ಟಲುಗಳು ಇವೆ. ಅಂಥ ಹಾಸ್ಟಲುಗಳಿಗೆ ಹುಡುಗರನ್ನು ಸೇರಿಸಿದರೆ ನನ್ನ point achieve ಆಯಿತು. ಮನಸ್ಸಿನಲ್ಲಿ ಇರತಕ್ಕ ನೋವನ್ನು ಹೇಳಿದೆ. Separate hostel ಬೇಕು ಎಂದಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಅವರು ಮುಂದಿನ ವಿಷಯವನ್ನು ತಿಳಿಸಬಹುದು.

Sri V. M. MASCARENHAS—The point is our technical schools and colleges are on the increase. Naturally, it is but right that Government should take notice of this question seriously, and increase the number of hostels to all these institutions and make sure that 17½ per cent or 20 per cent of the seats in these hostels are reserved for Scheduled Castes Students. Then I will be perfectly in favour of such a resolution. But I cannot accept the resolution as it stands and I must oppose it unless the two words 'Scheduled Castes' are deleted.

*ಶ್ರೀ ಬಿ. ರಾಚಯ್ಯ (ಯಳಂದೂರು ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಪ್ರಭಾಕರ್‌ರವರು ತಂದಿರತಕ್ಕ ಈ ನಿರ್ಣಯದಲ್ಲಿ ಅಡಗಿರತಕ್ಕ ತತ್ವವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಇದ್ದೇನೆ. ಕೈಗಾರಿಕೆ ಮತ್ತು technicalಗೆ ಸಂಬಂಧಪಟ್ಟ ನಿಮ್ಮ ತರಗತಿ ವಿದ್ಯಾರ್ಥಿಗಳಿಗೆ ಸಾಕಾದಷ್ಟು ವಿದ್ಯಾಲಯಗಳ ಸೌಲಭ್ಯ ಇಲ್ಲದೆ ಇರುವುದರಿಂದ ಅವರಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಸರ್ಕಾರದವರು ಕೂಡಲೆ ತರಬೇಕೆಂಬುದನ್ನು ಇದರಲ್ಲಿ ತಂದಿದ್ದಾರೆ. ಸರಕಾರದವರು ಇತ್ತೀಚೆಗೆ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂಬ ದೃಷ್ಟಿಯಿಂದ ಇನ್ನು ಮುಂದೆ ಎಲ್ಲಾ ಕೋಮಿನ ವಿದ್ಯಾರ್ಥಿಗಳೂ ಕೂಡ ವಿದ್ಯಾನಿಲಯಗಳಲ್ಲಿ ಏಕೀಭವಿಸಿ ವ್ಯಾಸಂಗ ಮಾಡುವ ದೃಷ್ಟಿಯಿಂದ ಕೋಮುವಾರು ಹಾಸ್ಟಲುಗಳು ಇರಕೂಡದು. ಮತ್ತು ಕೋಮುವಾರು ಆಧಾರದ ಮೇಲೆ ನಡೆಯತಕ್ಕ ಹಾಸ್ಟಲುಗಳಿಗೆ ಇನ್ನು ಮುಂದೆ grantನ್ನು ಕೊಡಕೂಡದೆಂದು ಸರ್ಕಾರದವರು ಒಂದು Orderನ್ನು ಕಳುಹಿಸಿರತಕ್ಕದ್ದು ಬಹಳ ಒಳ್ಳೆಯದು ಎಂದು ಕಂಡಾಗ್ಯೂ ತತ್‌ಕ್ಷಣದಲ್ಲಿ ಇದರಿಂದ ಏನಾಗುತ್ತದೆ ಎಂದರೆ ಹರಿಜನ ವಿದ್ಯಾರ್ಥಿಗಳು ಆರ್ಥಿಕ ದೃಷ್ಟಿಯಲ್ಲಿ ಬಹಳ ಹಿಂದುಳಿದಿರುವುದರಿಂದ ಬೇರೆ ಹಾಸ್ಟಲುಗಳಲ್ಲಿ ಏನು ಒಬ್ಬ ವಿದ್ಯಾರ್ಥಿಗೆ ಖರ್ಚು ಬೀಳುತ್ತದೋ ಅದನ್ನು ಕೊಟ್ಟು ಅಲ್ಲಿ ಸೇರಿ ವ್ಯಾಸಂಗ ಮಾಡುವುದು ಕಷ್ಟವಾಗಿ ಕಾಣುತ್ತದೆ. ಇವತ್ತಿನ ದಿವಸ ಇಂಜನಿಯರಿಂಗ್ ಕಾಲೇಜು ಹಾಸ್ಟಲ್, ಜನರಲ್ ಹಾಸ್ಟಲ್, ಮತ್ತು Agricultural College ಹಾಸ್ಟಲ್ ಇದೆ. ಈಗ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನವರು ವಿದ್ಯಾರ್ಥಿ ನಿಲಯವನ್ನು ತೆರೆದಿದ್ದಾರೆ. ಅಲ್ಲಿಯು ವಿದ್ಯಾರ್ಥಿಗಳು ಕೊಡತಕ್ಕ ಚಾರ್ಜನ್ನು ನಮ್ಮ ಆದಿಕರ್ಣಾಟಕ ಅಥವಾ ನಿಮ್ಮ ತರಗತಿಯ ವಿದ್ಯಾರ್ಥಿ ನಿಲಯದಲ್ಲಿ ಕೊಡತಕ್ಕ ಚಾರ್ಜಿಗೆ ಹೋಲಿಸಿ ನೋಡಿದರೆ, ಅದಕ್ಕೆ ಅಜಗಜಾಂತರವಿದೆ. ಅಷ್ಟು ಚಾರ್ಜನ್ನು ಕೊಟ್ಟು general hostelನಲ್ಲಿ ವ್ಯಾಸಂಗ ಮಾಡುವುದಕ್ಕೆ ಬಹಳ ಕಷ್ಟವಾಗಿರುವುದರಿಂದ general hostelನಲ್ಲಿ ನಿಮ್ಮ ತರಗತಿಯ ವಿದ್ಯಾರ್ಥಿಗಳು ಏನು ಚಾರ್ಜು ಕೊಡಬೇಕೋ ಅದನ್ನು ಸರ್ಕಾರದವರೇ ವಹಿಸಿಕೊಂಡರೆ ಆಗ ಪ್ರತ್ಯೇಕ ಹಾಸ್ಟಲನ್ನು ಕೇಳುವುದು ಸರಿಯಲ್ಲವೆಂದೂ, ನಮಗಾಗಿ ಹಾಸ್ಟಲುಗಳು ಬೇಕಾಗಿಲ್ಲ ಎಂದೂ ಹೇಳುವವರಲ್ಲಿ ನಾನೂ ಒಬ್ಬನಾಗಿದ್ದೇನೆ. ಆದಿಕರ್ಣಾಟಕ ಹಾಸ್ಟಲಿಗೆ ಯಾವ ಜನಾಂಗದವರೂ ಸೇರಬಾರದೆಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಮಂಡ್ಯದಲ್ಲಿ ಮಂಡ್ಯದ ಒಕ್ಕಲಿಗರು ಹಾಸ್ಟಲ್ ಎಂದು ಬೋರ್ಡ್ ಹಾಕಿದ್ದಾರೆ. ಇನ್ನು ಬೇರೆ ಬೇರೆ ಹೆಸರಿನ ಹಾಸ್ಟಲ್‌ಗಳು ಅಂದರೆ ಒಕ್ಕಲಿಗರ ಸಾರ್ವಜನಿಕರ ಹಾಸ್ಟಲ್ ಕುರುಬರ ಸಂಘದ ಹಾಸ್ಟಲ್ ಎಂದು ಇವೆ. ಅದೇ ರೀತಿಯಾಗಿ ಆದಿಕರ್ಣಾಟಕ ಸಾರ್ವಜನಿಕರ ಹಾಸ್ಟಲ್ ಎಂದು ಕರೆದು ಅದನ್ನು ನಡೆಸಿದರೆ ತಪ್ಪೇನು? ಈ ರೀತಿ ನಿಮ್ಮ ತರಗತಿಯವರಿಗಾಗಿ ಹಾಸ್ಟಲುಗಳನ್ನು ಕಟ್ಟಿಸಿರುವುದನ್ನು ಆಯಾ ಸಂಸ್ಥೆಗಳಿಗೆ ಕೊಡಬೇಕೇ ವಿನಾ ಈ ಕಟ್ಟಡವನ್ನು ಉಪಯೋಗಿಸಲು ಬೇರೆ ಇಲಾಖೆಗಳಿಗೆ ಬದಲಾವಣೆ ಮಾಡಕೂಡದು. Legislature ನಲ್ಲಿ ಸುಮಾರು 19 ಲಕ್ಷ ರೂಪಾಯಿಗಳನ್ನು ನಿಮ್ಮ ವರ್ಗದವರ ಪುರೋಭಿವೃದ್ಧಿಗಾಗಿ exclusive ಆಗಿ ಮುಂಜೂರು ಮಾಡಿದ್ದಾರೆ. ಹೀಗೆ ಅವರ ಪುರೋಭಿವೃದ್ಧಿಗಾಗಿ ಕೊಟ್ಟ ಮೇಲೆ ಅವರ ಕೊಟ್ಟಗ್ಯಾಂಟು ಸಂಸ್ಥೆಗೆ ಸಂಬಂಧಪಟ್ಟುದು. ಆದ್ದರಿಂದ ಅದು ಸರ್ಕಾರೀ ಕಟ್ಟಡವಾಗಿ ಉಳಿಯುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ವರ್ಷೆ ವರ್ಷೇ ಸುಮಾರು 55 ಸಾವಿರ ರೂಪಾಯಿಗಳ ಸ್ಕಾಲರ್‌ಷಿಪ್ lapse ಆಗುತ್ತಿದೆ. Lapse ಆಗುವ ದುಡ್ಡನ್ನು reappropriate ಮಾಡಿ ಹಾಸ್ಟಲುಗಳಿಗೆ ಎಲ್ಲಿ ವಸತಿ ಸೌಕರ್ಯವಿಲ್ಲವೋ ಅಂಥ ಕಡೆ ಆವುಗಳನ್ನು ಕಟ್ಟಿಸಿ ವಿದ್ಯಾರ್ಥಿಗಳೆಲ್ಲರಿಗೂ

(ಶ್ರೀ ಬಿ. ರಾಚಯ್ಯ.)

ಅವಕಾಶವಾಗುವ ರೀತಿಯಲ್ಲಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಸರ್ಕಾರದವರಿಗೆ ವಿಶ್ವವಿದ್ಯಾನಿಲಯದ ಬಾಬಿನಲ್ಲಿ ಏನು ಉಳಿಯುತ್ತದೋ ಆ ದುಡ್ಡನ್ನೂ ಕೊಟ್ಟ ಪಕ್ಷದಲ್ಲಿ ಇಂಥ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿ ಕೊಡಬಹುದು. ನಾವು ಹೊಸದಾಗಿ ಗ್ರಾಂಟು ಕೇಳುತ್ತಾ ಇಲ್ಲ. ಸರ್ಕಾರದವರು ಇದನ್ನು ಒಪ್ಪಿಕೊಂಡು ಈ ಕೆಲಸವಾಗುವಂತೆ ಮಾಡಿಕೊಡಬೇಕೆಂದು ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

Sri K. HANUMANTHAIYA (Chief Minister).—Sir, I do not think my Hon'ble friends would like to discuss this question at great length. The issue is very simple and I do not suppose there is any difference of opinion. So far as the approach to the resolution is concerned, it may be in the wording that some people may want a change. I am therefore seeking the permission of the House to reply on behalf of Government and there will be no necessity thereafter for discussion.

Mr. DEPUTY SPEAKER.—I think that the subject has also been sufficiently discussed by the Hon'ble Members who are interested in the subject matter and the Goverment have understood it; it is better to give the Government a chance to reply.

Sri K. HANUMANTHAIYA.—Sir, it is an accepted policy of the Government as it is laid down by the Constitution that we must give special facilities for Scheduled Castes and Tribes in the matter of educational advancement. It is also the accepted policy of this Government that instead of turning out what is called students in general education, it will be more appropriate for students to be trained in avocations. It applies particularly to the students of the Depressed Classes and Tribes for unless the economic condition of these people are improved, nothing tangible will have been achieved. With that point this House as well as the Government are in complete agreement. In consonance with that view, Sri Prabhakar has brought this resolution asking for better facilities for students of Depressed Classes in the matter of industrial and technical studies. The Government are in agreement with the idea contained in this resolution. It is only whether separate hostels be opened or facilities be afforded in due measure to the students of the Depressed Classes in general hostels is the question. There are now hostels exclusively meant for Scheduled Castes. In those hostels it goes without saying that preference will be given to students who want to undergo training in industrial and technical studies. Wherever there is no hostel meant for these classes, it is certainly the intention of the Government to provide them with facilities in general hostels. The question will naturally crop up that the boarding and lodging charges in these general hostels are very high and therefore these students may not be able to bear them fully. In such cases, it is the desire of the Government to suitably assist the students financially. Therefore, I am in agreement with the spirit of the resolution and I therefore request Sri K. Prabhakar to withdraw the resolution.

Sri K. PRABHAKAR.—In view of the assurance given by the Government in appreciation of the spirit contained in the resolution, I beg leave of the House to withdraw the resolution.

The resolution was by leave withdrawn.

No. 4 HOISTING THE NATIONAL FLAG IN EVERY SCHOOL AND COLLEGE.

ಶ್ರೀ ಟಿ. ಸಿ. ಬನಪ್ಪ (ತರೀಕೆರೆ).—ಸ್ವಾಮಿ, ನನ್ನ ನಿರ್ಣಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕಾರ್ಯರೂಪಕ್ಕೆ ತರಲು ಒಪ್ಪಿದ್ದಾರೆ. ಆದಕಾರಣ ಇದನ್ನು ಮಂಡಿಸಲು ಇಷ್ಟಪಡುವುದಿಲ್ಲ.

No. 5 NATIONALISATION OF KOLAR GOLD MINES.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೇಳುತ್ತೇನೆ:

"ಸೋಷಿಯಲಿಸ್ಟಿಕ್ ಮಾದರೀಯ ಸಮಾಜ' ಸಾಧನೆಯ ಮೊದಲನೆಯ ಪ್ರಯತ್ನವಾಗಿ ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡಲು ಸರ್ಕಾರದವರು ಕೂಡಲೇ ಆವಶ್ಯಕವಾದ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."